**ದಿ.08-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಸಿ.ಬಿ.ವಿ ವಕೀಲರಿಂದ.**

1. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿರದೇ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಒಟ್ಟು ಕುಟುಂಬದ ಆದಾಯವನ್ನು ತೋರಿಸಲು ದಾಖಲಾತಿಗಳು ಇವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮಾವನಿಗೆ ಅವರ ಅಜ್ಜನಿಂದ ಬಂದಂತಹ ಯಾವುದೇ ಸ್ವತ್ತುಗಳು ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಅಜ್ಜನಿಂದ ಬಂದ ಸ್ವತ್ತುಗಳು ಇದ್ದು ಆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಮಾವನಿಗೆ ಕೋರನಹಳ್ಳಿ ಮತ್ತು ಭದ್ರಾವತಿ ಬಳಿ ಇರುವ ಬಳ್ಳಿಕೆರೆ ಗ್ರಾಮದಲ್ಲಿ ಅಜ್ಜನಿಂದ ಬಂದ ಆಸ್ತಿಗಳು ಇದ್ದವು. ನನ್ನ ಮಾವ ಅವರ ಪಿತ್ರಾರ್ಜಿತ ಸ್ವತ್ತುಗಳನ್ನು ಯಾರಿಗೆ ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎನ್ನುವ ಮಾಹಿತಿ ನನಗೆ ಇರುವುದಿಲ್ಲ. ಆ ಮಾಹಿತಿಯನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ನೇ ಪ್ರತಿವಾದಿಯು ಕರ್ನಾಟಕ ಬ್ಯಾಂಕಿನಲ್ಲಿ ಸಾಲವನ್ನು ಪಡೆದು ದಾವಾ ಐಟಂ.ನಂ.1 ಮತ್ತು 3 ನೇ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. 1 ನೇ ಪ್ರತಿವಾದಿಯು ದರ್ಶನ್ ವಿದ್ಯಾಶ್ರೀ ಮತ್ತು ಶಕುಂತಲಾ ಇವರಿಂದ ದಿ.23.7.2007 ರಲ್ಲಿ ಖರೀದಿ ಮಾಡಿರುತ್ತಾರೆ. ಅದೇ ರೀತಿ ಸಿ.ಎಂ.ನಿರ್ವಾಣಪ್ಪ ಮತ್ತು ಅವರ ಸಹೋದರ ನೀಲಕಂಠಪ್ಪನವರಿಂದ 10 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನಿಜ.

ಅದೇ ರೀತಿ ಅದೇ ದಿನ ನೀಲಕಂಠಪ್ಪ ಮತ್ತು ನಿರ್ವಾಣಪ್ಪನವರಿಂದ 2 ಎಕರೆ ಜಮೀನನ್ನು 1 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ಸದರಿ ಆಸ್ತಿಗಳನ್ನು ಖರೀದಿ ಮಾಡಲು 1 ನೇ ಪ್ರತಿವಾದಿ ಕರ್ನಾಟಕ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಾಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳ ಪಹಣಿ ಪತ್ರಿಕೆಗಳಲ್ಲಿ ಸದರಿ ಜಮೀನುಗಳನ್ನು ಕರ್ನಾಟಕ ಬ್ಯಾಂಕಿಗೆ ಆಧಾರ ಮಾಡಿರುತ್ತಾರೆ ಎಂದು ಬರೆದಿದೆ ಎಂದರೆ ಸಾಕ್ಷಿ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು ಖರೀದಿ ಮಾಡಿದ ನಂತರ ಬೆಳೆ ಸಾಲ ಪಡೆದಿರುತ್ತಾರೆ ಎನ್ನುತ್ತಾರೆ. ದಿ.10.9.2008 ರಂದು ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಿಜ. ಸದರಿ ವಿಭಾಗದಲ್ಲಿ ದಾವಾ ಐರಟಂ ನಂ.1 ಮತ್ತು 3 ನೇ ಸ್ವತ್ತು ನನ್ನ ಗಂಡನ ಹಿಸ್ಸೆಗೆ ಬಂದಿರುತ್ತದೆ ಎಂದರೆ ನಿಜ. ಸದರಿ ಹಿಸ್ಸೆಯ ಪ್ರಕಾರ ಖಾತೆ ಬದಲಾವಣೆ ಅಗಿರುತ್ತದೆ ಎಂದರೆ ನಿಜ. ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು ಖರೀದಿಸಿದಾಗ ಅವು ಖಾಲಿ ಜಮೀನುಗಳಾಗಿದ್ದವು ಎಂದರೆ ನಿಜ. ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡು ಸಾಲವನ್ನು ತೀರುವಳಿ ಮಾಡದೇ ಇದ್ದಲ್ಲಿ ಜಮೀನುಗಳನ್ನು ಹರಾಜು ಮಾಡುತ್ತಾರೆ ಎಂದರೆ ನಿಜ. ಕರ್ನಾಟಕ ಬ್ಯಾಂಕಿನಿಂದ ಪಡೆದ ಸಾಲದ ಬಾಬ್ತು ಅಸಲು ಅಥವಾ ಬಡ್ಡಿಯನ್ನು 1 ನೇ ಪ್ರತಿವಾದಿ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲೂ ಸಹ 1 ಮತ್ತು 5 ನೇ ಪಕ್ಷಗಾರರೇ ಸಾಲವನ್ನು ತೀರುವಳಿ ಮಾಡಬೇಕು ಎಂದು ಬರೆದಿದೆ ಎಂದರೆ ನಿಜ. ಆ ರೀತಿ ಸಾಲ ತೀರುವಳಿ ಮಾಡುವ ಹೊಣೆಗಾರಿಕೆ ಅವರ ಮೇಲೆ ಇತ್ತು ಎಂದರೆ ನಿಜ. ದಾವಾ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು ಖರೀದಿಸಿದ ಸಮಯದಲ್ಲಿ ಅವು ಖಾಲಿ ಜಮೀನುಗಳಾಗಿದ್ದು ಆ ಜಮೀನುಗಳಿಂದ

ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ನಿಜ. ಆನಂತರವೂ ಸಹ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳಿಂದ ಯಾವುದೇ ಆದಾಯವಿರಲಿಲ್ಲ ಎಂದರೆ ಸರಿಯಲ್ಲ. ಅಸಲು ಮತ್ತು ಬಡ್ಡಿಯ ಹಣವನ್ನು ಬ್ಯಾಂಕಿಗೆ ಪಾವತಿ ಮಾಡದೇ ಹೋದಲ್ಲಿ ಸಾಲದ ಹಣ ದುಪ್ಪಟ್ಟು ಆಗುತ್ತದೆ ಎಂದರೆ ನಿಜ. ನನ್ನ ಗಂಡ ಬ್ಯಾಂಕಿಗೆ ಸಾಲವನ್ನು ಬ್ಯಾಕಿಗೆ ಮರುಪಾವತಿ ಮಾಡದೇ ಇದ್ದ ಕಾರಣ ಬ್ಯಾಂಕಿನ ಸಾಲ ದುಪ್ಪಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಸಾಲ ತೀರುವಳಿ ಮಾಡುವ ಉದ್ದೇಶದಿಂದ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. 2012 ನೇ ಸಾಲಿನಲ್ಲಿ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. 2012 ನೇ ಸಾಲಿನಲ್ಲೂ ಸಹ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 2012 ರಲ್ಲಿ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳಲ್ಲಿ ಅಡಿಕೆ ತೋಟವಿತ್ತು. ಅಡಿಕೆ ಗಿಡಗಳಿಂದ 8 ವರ್ಷಕ್ಕೆ ಫಸಲು ಬರುತ್ತದೆ ಎಂದರೆ ಸಾಕ್ಷಿ ಅಡಿಕೆ ಗಿಡಗಳನ್ನು ಚೆನ್ನಾಗಿ ಪೋಷಣೆ ಮಾಡಿದ್ದಲ್ಲಿ 4 ವರ್ಷಕ್ಕೆ ಫಸಲು ಬರುತ್ತದೆ ಎನ್ನುತ್ತಾರೆ. 4 ವರ್ಷಕ್ಕೆ ಫಸಲು ಸಿಗುತ್ತದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು ಮಾರಾಟ ಮಾಡಿದ ಸಮಯದಲ್ಲಿ ಆ ಜಮೀನುಗಳಲ್ಲಿ 2 ವರ್ಷದ ಅಡಿಕೆ ಸಸಿಗಳು ಇದ್ದವು ಎಂದರೆ ಸರಿಯಲ್ಲ.

4. ನನ್ನ ಗಂಡ ವ್ಯವಸಾಯವನ್ನು ಹೊರುತುಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ ಎಂದರೆ ನಿಜ. ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳಿಂದ ಯಾವುದೇ ಆದಾಯ ಇಲ್ಲದಿದ್ದ ಕಾರಣ ಬ್ಯಾಂಕಿನ ಸಾಲ ತೀರುವಳಿ ಮಾಡಲು ಆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳ ಸರ್ವೆ ನಂಬರಿನಲ್ಲಿ ನನ್ನ ಅತ್ತೆಗೂ ಸಹ ಜಮೀನು ಇದೆ ಎಂದರೆ ನಿಜ. ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳು ನನ್ನ ಅತ್ತೆಯ ಸ್ವತ್ತಿಗೆ ಲಗತ್ತಾಗಿವೆ ಎನ್ನುವ ಕಾರಣಕ್ಕೆ ಅವರು ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮೋಸ ಮಾಡುವ ಉದ್ದೇಶದಿಂದ ಆ ರೀತಿ ಸೃಷ್ಟಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ.

5. ದಾವಾ ಐಟಂ ನಂ.5 ನೇ ಸ್ವತ್ತು ನನ್ನ ಫೂವನಿಗೆ ಅವರ ಅತ್ತಯ ಕಡೆಯಿಂದ ಬಂದ ಸ್ವತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲಲ. ವಿಭಾಗದಲ್ಲಿ ದಾವಾ ಐಟಂ ನಂ.5 ನೇ ಸ್ವತ್ತನ್ನು ನನ್ನ ಗಂಡನ ಹಿಸ್ಸೆಗೆ ಕೊಟ್ಟಿದ್ದರು ಎಂದರೆ ನಿಜ. ದಾವಾ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳಾದ ಕಾರಣ ನನ್ನ ಮಗಳಿಗೆ ದಾವಾ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಇತರೆ ಪ್ರತಿವಾದಿಯರಿಗೂಸಹ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಅವರ ಸ್ವತ್ತುಗಳ ಮೇಲೂ ಸಹ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.